(c) The Number of criminal cases filed are 13 (for details *vide* Statement placed on the Table of the House).‡

(d) The delinquents are discharged by the Munsiff-Magistrate, Hadagali. Hence this question does not arise.

REPAIR OF THE TANKS IN BELLARY DISTRICT

980. Sri B. S. VEERABHADRAPPA (Kudligi).—

Will the Minister for Public Works and Electricity be pleased to state :—

(*a*) the name of the tanks in each of the taluks in Bellary District and the extent of land irrigated from the said tanks ;

(*b*) the number of tanks which were repaired in each of the taluks of this District after the formation of the new State ; the amount spent on each of the tanks ;

(*c*) the number of tanks in each of the taluks of the District pending repair due to breaches that took place many years ago and their names ;

(*d*) if so, the reasons for not repairing such tanks ?

Sri H. M. CHANNABASAPPA (Minister for Public Works and Electricity).—

(*a*) The details are furnished in Statement I placed on the Table of the House.*

(*b*) The details are furnished in Statement II placed on the Table of the House.*

(*c*) The details are furnished in Statement III placed on the Table of the House.*

---

‡Copy placed in the Mysore Legislature Library *Vide* No. 38/Dated 16-5-1973.

(*d*) Details regarding the repair works of the breached tanks are furnished in Statement IV placed on the Table of the House.*

Calling Attention to matters of urgent Public Importance.—

(i) re: hardship caused to the weavers in Tiptur Taluk due to non-supply of yarn to them.

Sri T. M. MANJUNATH (Tiptur).— Madam Speaker, I beg to call the attention of the Minister for Industries to the hardship caused to the weavers in Tiptur Taluk due to non-supply of yarn to them.

Sri S. M. KRISHNA (Minister for Industries).— I state as follows :—

Since about a year, there has been countrywide shortage of yarn, particularly in the form of hanks required by the handloom weavers. The position became more difficult after introduction of power cut, since yarn production in Tamil Nadu, which is a major producer of yarn, went down sharply. In March this year, Government of India have introduced complete control on the distribution of yarn. In Mysore State, the Mysore Small Industries Corporation is acting as the main agent for purchase of yarn from the mills. A number of primary retail agents have been entrusted with the distribution of yarn to weavers. In Tiptur Taluk, M/s Sri Jayalaxmi Cotton Powerloom Weavers Co-operative Society, Halepalya, has been selected as one such agent. The following quantities of yarn have been allotted for distribution through the Society :

---

*Copy placed in the Mysore Legislature Library *Vide* No. 39 / D. 16-5-1973.

20s	...	2,874 Kgs.
26s	...	2,715 Kgs.
32s	...	724 Kgs.
28s	...	724 Kgs.

part of the yarn has already been moved by the Society from the main depot at Bangalore. More allotments will follow.

2. Simultaneously, census of handlooms and powerlooms and issue of identity cards has been taken up. Pending issue of cards, the retail agents have been authorised to sell yarn at the rate of 5 kgs. per handloom and 10 kgs. per powerloom. This has been done on an *adhoc* basic and further supplies will be regulated according to the total quantum of allocations to the State. It is expected that with the lifting or relaxation of power cut after the on set of monsoon, there will be improvement in the situation.

ಶ್ರೀ ಟಿ. ಎಂ. ಮಂಜುನಾಥ.— ನಾನು ತಮ್ಮ ಗಮನಕ್ಕೆ ಈ ವಿಚಾರವನ್ನು ತಂದಾಗ ತಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ, ಅದಕ್ಕೆ ನನ್ನ ಅಭಿನಂದನೆಗಳು. ಇದರ ಜೊತೆಗೆ ಈ ಮೂರು ಗ್ರಾಮಗಳಲ್ಲಿ ಹಳೇಪಾಳ್ಯ, ಕೊಟ್ಟನಾಯಕನ ಹಳ್ಳಿ ಮತ್ತು ಇಂಡಸಕೆರೆ, ಅಲ್ಲಿರತಕ್ಕ ನೇಕಾರರು ಕೇವಲ ಇದರಿಂದಲೇ ಜೀವನ ಮಾಡತಕ್ಕವರು. ಅದಕ್ಕೋಸ್ಕರ ನಾನು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ, ತಾವು ಈಗ ಏನು ನೂಲನ್ನು ಕೊಡುತ್ತಿದ್ದೀರಿ ಅದು ಸಾಲದು ಮತ್ತು ಅದನ್ನು ವಿತರಣೆ ಮಾಡತಕ್ಕಂಥ ಸಂದರ್ಭದಲ್ಲಿ ಸಹಕಾರ ಸಂಘಗಳಲ್ಲಿ ಸದಸ್ಯರಾಗಿರುವವರಿಗೆ ಮಾತ್ರ ಕೊಟ್ಟರೆ ಸಾಲದು, ಸದಸ್ಯರಲ್ಲದವರಿಗೂ ನೂಲನ್ನು ಹಂಚುವ ವ್ಯವಸ್ಥೆಯನ್ನು ಮಾಡಬೇಕು. ತಾಲ್ಲೂಕಿನಲ್ಲಿ; ಇಂಡಸ್ಟ್ರಿಯಲ್ ಎಕ್ಸ್‌ಟೆನ್‌ಷನ್ ಆಫೀಸರ ಇದ್ದಾರೆ, ಅವರು ತಾವು ಒಂದು ಆದೇಶ ಕೊಟ್ಟರೆ, ಅಲ್ಲಿಗೆ ಹೋಗಿ ನಿಜವಾಗಿಯೂ ನೇಕಾರರು ಯಾರು. ಎಷ್ಟರ ಮಟ್ಟಿಗೆ ನೂಲು ಬೇಕಾಗುತ್ತದೆ ಎನ್ನುವುದು ತಿಳಿಯುತ್ತಾರೆ. ನನಗೆ ತಿಳಿದಮಟ್ಟಿಗೆ ಒಂದು ವಾರಕ್ಕೆ ೨೦ ಕಟ್ಟು ನೂಲು ಬೇಕಾಗುತ್ತದೆ. ತಾವು ಕೊಡತಕ್ಕ ಕ್ವಾಂಟಿಟಿ ಬಹಳ ಕಡಿಮೆ. ನಿಜವಾಗಿಯೂ ಅವರು ಈ ದಿವಸ ಉಪವಾಸವಿದ್ದಾರೆ. ಆದ್ದರಿಂದ ದೊಡ್ಡಮನಸ್ಸು ಮಾಡಿ ತಾವುಗಳು ಅವರಿಗೆ ಒಂದು ತಿಂಗಳಲ್ಲಿ ೧೫ ದಿವಸಕ್ಕಾಗುವಷ್ಟು ನೂಲನ್ನು ವಿತರಣೆ ಮಾಡಿದರೆ ಅವರ ಸಂಸಾರಗಳನ್ನು ಕಾಪಾಡಿದಂತಾಗುತ್ತದೆ ಎಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.— ಮಾನ್ಯ ಸದಸ್ಯರ ಕಳಕಳಿಯನ್ನು ಸರ್ಕಾರದವರು ಅರ್ಥ ಮಾಡಿಕೊಳ್ಳಬಲ್ಲರು. ಇದರಲ್ಲಿ ನಾವು ದೊಡ್ಡ ಮನಸ್ಸು ಮಾಡತಕ್ಕ ಪ್ರಶ್ನೆ ಉದ್ಭವಿಸುವುದಿಲ್ಲ. ನಮ್ಮ ದೇಶದಲ್ಲಿ ನೂಲಿನ ಕೊರತೆ ಇರತಕ್ಕದ್ದು ತಮಗೆ ಗೊತ್ತಿದೆ. ಈ ದೃಷ್ಟಿಯಿಂದ ನಾವು ಎಷ್ಟು ದೊಡ್ಡ ಮನಸ್ಸು ಮಾಡಿದರೂ ಕೂಡ ಅದೇ ಪ್ರಮಾಣದಲ್ಲಿ ನೂಲಿನ ಉತ್ಪಾದನೆ ದೊಡ್ಡದು ಆದರೆ ಈ ತಮ್ಮ ಬೇಡಿಕೆಯನ್ನು ಈಡೇರಿಸುವುದಕ್ಕೆ ಸಾಧ್ಯವಾಗುತ್ತದೆ. ಸರ್ಕಾರ ಅನುಸರಿಸತಕ್ಕ ನೀತಿ ಏನೆಂದರೆ, ಬರತಕ್ಕ ನೂಲನ್ನು ಇಕ್ವಿಟಬಲ್ ಆಗಿ, ಸಮನಾಗಿ ನೇಕಾರರು ಎಲ್ಲೆಲ್ಲಿ ಕೇಂದ್ರೀಕೃತ ವಾಗಿದ್ದಾರೆ ಆ ಕೇಂದ್ರಗಳಲ್ಲಿ ನೂಲನ್ನು ವಿತರಣ ಮಾಡಬೇಕು ಎನ್ನುವ ದೃಷ್ಟಿಯಿಂದ ಕೇಂದ್ರಸರ್ಕಾರದವರು ನೂಲನ್ನು ವಿತರಣೆ ಮಾಡುವ ವ್ಯವಸ್ಥೆಯನ್ನು ತಮ್ಮ ಹಸ್ತಕ್ಕೆ ತೆಗೆದುಕೊಂಡಿದ್ದಾರೆ. ಮೈಸೂರಿನಲ್ಲಿ ವೆಲ್-ನಿಟ್ ಕೋ-ಆಪರೇಟೀವ್ ವೀವಿಂಗ್ ಸೊಸೈಟಿ ಇಲ್ಲ ಎನ್ನುವುದು ಮಾನ್ಯ ಸದಸ್ಯರು ಒಪ್ಪತಕ್ಕ ವಿಚಾರ. In the absence of that ಬೇರೆ ಯಾವುದಾದರೂ ವ್ಯವಸ್ಥೆಯನ್ನು ಮಾಡ ಬೇಕಾದರೆ ಅದಕ್ಕೆ ಸಾಕಷ್ಟು ಕಾಲ ಬೇಕಾಗುತ್ತದೆ. ಇನ್ನೊಂದು ಇನ್ಸ್ಟ್ರುಮೆಂಟ್ ಅನ್ನು ಸೃಷ್ಟಿಮಾಡಬೇಕಾಗುತ್ತದೆ. ಆದ್ದರಿಂದ ಯಾವ ಯಾವ ಸೊಸೈಟಿ ಗಳನ್ನು ನಮ್ಮ ರಿಜಿಸ್ಟ್ರಾರ್ ಮತ್ತು ಡೆಪ್ಯೂಟಿ ರಿಜಿಸ್ಟ್ರಾರ್ ಅವರು ಶಿಫಾರಸು ಮಾಡಿರುತ್ತಾರೆ ಅಂಥ ಸೊಸೈಟಿಗಳು ಫಿನಾನ್ಸಿಯಲ್ ಸೌಂಡ್ ಆಗಿವೆಯೇ ಎಂದು ನೋಡಿ ಸರ್ವೆಫೈ ಮಾಡಿದರೆ ಅವುಗಳಿಗೆ ಈ ಕಾರ್ಯ ನಿರ್ವಹಣೆ ವಹಿಸಿಕೊಟ್ಟರೆ ಒಳ್ಳೆಯದು ಎಂದು ಅಂಥ ೧೭೬ ಏಜೆಂಟುಗಳನ್ನು ರಾಜ್ಯದಾದ್ಯಂತ ನಾವು ನೇಮಿಸಿದ್ದೇವೆ. ಆ ಏಜೆಂಟುಗಳಲ್ಲಿ ಕೆಲವರಿಗೆ ಹಣದ ತೊಂದರೆ ಇರುವುದರಿಂದ ಅವರು ನೂಲನ್ನು ಕೊಂಡುಕೊಳ್ಳಬೇಕಾದರೆ, ಸ್ಮಾಲ್ ಇಂಡಸ್ಟ್ರಿಸ್ ಕಾರ್ಪೊ-ರೇಷನ್‌ವರ ಹಣಕಾಸಿನ ಅಡ್ಡಿ ಆಡಚಣೆಗಳು ಇವೆ. ಆದ್ದರಿಂದ ಅಲ್ಲಿ ಹಣಕಾಸಿನ ಕೊರತೆ ಇದೆ. ಬೇರೆ ಒಂದು ಅಲ್ಟರ್ನೇಟಿವ್ ಅರೆಂಜ್‌ಮೆಂಟ್ ಮಾಡಬೇಕು ಎನ್ನುವ ಬಗ್ಗೆ ಸರ್ಕಾರದವರು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಈಗ ಮಳೆಯು ಪ್ರಾರಂಭವಾಗಿ, ಮುಖ್ಯವಾಗಿ ತಮಿಳುನಾಡಿನಲ್ಲಿ ಪವರ್ ಕಟ್ ಏನು ಇದೆ ಅದನ್ನು ಸುಧಾರಣೆಮಾಡಿದ ಮರುದಿವಸವೇ ಈ ನೂಲಿನ ಹಾಹಾಕಾರ ಏನು ಇದೆ ಅದು ಬಹಳ ಮಟ್ಟಿಗೆ ಕಡಿಮೆಯಾಗುತ್ತದೆ ಎಂದು ಸರ್ಕಾರದ ಅಭಿಪ್ರಾಯ ಇದೆ.

(ii) Re: Death of Goats and Sheep in Humnabad and Bidar Taluks due to some disease.

Sri V. N. PATIL (Humnabad).—Madam Speaker, I call the attention of the Hon. Minister for Animal Husbandry in connection with the mortality of sheeps and goats at Humnabad and Bidar taluks.

†Sri K. H. PATIL (Minister for Agriculture and Forests).– Sir, on behalf of the Minister of State for Animal Husbandry, I mention the following statement.

Government have enquired about the prevalance of disease in Sheep and Goats in Humnabad and Bidar Taluks. The disease has been dioganised as "Entero Toxaemia". Government are informed that the disease was prevailing since 20th March 1973 in Sindol and there were 25 attacks in Goats. 23 goats have died due to this disease. Similarly, in Rajgiri village, the disease was prevailing since 10th March 1973 and 18 deaths of goats have been reported.

2. Instructions have been issued to undertake vaccinations immediately against Entero Toxaemia. The situation is reported to be under control at present.

ಶ್ರೀ ವಿ. ಎನ್. ಪಾಟೀಲ್.—ಎರಡು ವಿವರಣೆಗಳು ಮಾನ್ಯ ಮಂತ್ರಿಗಳು ಕೊಡಬೇಕು. ಈ ತರಹ ರೋಗಗಳು ಪ್ರತಿ ವರ್ಷ ಫೆಬ್ರುವರಿ ಮುಗಿದ ಮೇಲೆ ಮಾರ್ಚಿಯಿಂದ ಹಿಡಿದು ಮೇ ವರೆಗೆ ಹರಡುತ್ತಾ ಇರುತ್ತವೆ. ಅದಕ್ಕೆ ಬೇಕಾದಂಥ ವ್ಯಾಕ್ಸಿನೇಷನ್ ಸಫಿಷಿಯೆಂಟ್ ಸ್ಟಾಕ್ ಇಟ್ಟು ಯಾವ ಯಾವ ಭಾಗದಲ್ಲಿ ರೋಗ ಹರಡುವಂಥ ಲಕ್ಷಣವಿದೆಯೋ ಅಲ್ಲೆಲ್ಲಾ ಪ್ರಿಕಾಷನ್ಸ್ ತೆಗೆದುಕೊಳ್ಳುವ ಒಂದು ಅಶ್ಯೂರೆನ್ಸ್ ಸರ್ಕಾರ ಕೊಡಬೇಕು. ಎರಡನೆಯದು ಗೋಟ್ಸ್ ಮತ್ತು ಶೀಪ್ಸ್ ಇಡುವವರು ಬಹಳ ಬಡ ಜನರು, ನೊಮಾಡಿಕ್ ಟ್ರೈಬ್ಸ್, ಗುಡ್ಡ ಸುತ್ತಾಡಿಕೊಂಡು ಕುರಿಗಳನ್ನು ಸಾಕಿ ಆ ಮೇಲೆ ಅವನ್ನು ಕಟ ಕಿಗೆ ಕೊಡುತ್ತಾರೆ. ೫೫ ಕುರಿಗಳಿಗೆ ಅಟಾಕ್ ಆದಾಗ ೨೩ ಸತ್ತು ಹೋದವೆಂದು ಹೇಳುತ್ತೀರಿ. ಅಟಾಕ್ ಆದ ಮೇಲೆ there is rarely any chance of surevival. ಇಷ್ಟು ಅಗಾಧ ನಷ್ಟ ಬಂದಿರುವುದರಿಂದ ಮತ್ತು ಸ್ಕೇರ್ಸಿಟಿ ಕಂಡೀಷನ್ ಅಲ್ಲಿ ಇರುವುದರಿಂದ ಸರ್ಕಾರವು ಟೋಕನ್ ರಿಲೀಫ್ ಅಥವಾ ಹೆಲ್ಪ್ ಕೊಡುವುದಕ್ಕೆ ವಾಗ್ದಾನವನ್ನು ಕೊಡಬಲ್ಲರೇ?

Sri K.H. PATIL.—Madam Speaker, this bacteria which causes "Entero Toxaemia" is present in the soil and it is an intestinal disease which cannot be cured with the help of medicine. The only remedy is vaccination. As the Hon'ble Member has suggested, Government has already taken precautionary measures to see that vaccination is done without any loss of time.

It may be appreciated by the Hon'ble Members without wasting any time, the moment it was reported that the epedimic was spreading, the vaccine was sent to the spot and vaccination was taken up. That is the reason why further deaths were stopped. Government very much regret the death of 23 animals.

Regarding compensation, it is difficult for the Government to take decision immediately. However, the view of the Hon'ble Member will be considered at the appropriate time.

(iii) Re : Transfering and postings of Secretary APMC Siddapur to Hirekerur

Sri B. G. BANKAR.— I call the attention of the Hon. Minister for Co-operation as regards the transfer of Sri Patre from Siddapur and keeping it in abeyance.

Sri A. SHANKAR ALVA (Minister for Co-operation).—It-is a fact that one Shri G. V. Patre, Secretary, Agricultural Produce Market Committee, Siddapur, was transferred and posted to Agricultural Produce Market Committee, Hirekerur by the Additional Chief Marketing Officer, Bangalore *vide* his Order No. MD. 41183-93-EST/72-73, dated 8-3-1973 and the Additional Chief Marketing Officer, Bangalore kept the transfer of the above Officer in abeyance till the end of May 1973 due to the recommendations made by the Chairman, Agricultural Produce Market Committee, Siddapur on the ground of domestic difficulties of the Officer.

However, the stay order of the Additional Chief Marketing Officer, Bangalore was lifted on 12-4-73 and the said officer was directed to hand over charge of his present post immediately and join his new post. Shri G. V. Patre has been relieved at Siddapur on 8th May, 1973 and he will be joining duty at Hirekerur shortly.

ಶ್ರೀ ಬಿ. ಜಿ. ಬಣಕಾರ.— ನಿಮ್ಮ ಆಜ್ಞೆಯನ್ನು ಜಾರಿಯಲ್ಲಿ ತಂದಿದ್ದಕ್ಕಾಗಿ ತಮ್ಮನ್ನು ವಂದಿಸಿ, ಇನ್ನು ಮುಂದೆ ಕೂಡ ಯಾವುದೇ ಅಧಿಕಾರಿಗಳ ವರ್ಗಾವಣೆ ಆರ್ಡರ್ ಮಾಡುವಾಗ ಮೊದಲೇ ವಿಚಾರಮಾಡಿ ಮಾಡಬೇಕು. ತಡೆ ಆಜ್ಞೆ ಹೊರ

ಡಿಸಿದಂತೆ ತಿನ್ರದಲ್ಲಿ ಇದನ್ನು ಜಾರಿಯಲ್ಲಿ ತಂದು ಸಾರ್ವಜನಿಕರಿಗೆ ಯಾವುದೇ ಖಾತೆಯಲ್ಲಿ ತೊಂದರೆಯಾಗದಂತೆ ಮಾಡಬೇಕೆಂದು ವಿನಂತಿ.

ಶ್ರೀ ಎ. ಶಂಕರ್ ಆಳ್ವ.— ನಿಮ್ಮ ಸಲಹೆಯನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳುತ್ತೇವೆ.

Scarcity of drinking water in Bijapur District

†ಶ್ರೀ ಎಂ ಕೆ. ಸುರಪುರ್ (ಧಾರವಾಡ ಗ್ರಾಮಾಂತರ).— ಬಿಜಾಪುರದಲ್ಲಿ ನೀರಿನ ಸಲುವಾಗಿ ಎರಡು ಮಾತು ಹೇಳುತ್ತೇನೆ. ಬಿಜಾಪುರದಲ್ಲಿ ನೀರು ಇಲ್ಲ. ನಮ್ಮ ಕಾಲೇಜು ಪ್ರಿನ್ಸಿಪಾಲ್ ಮತ್ತು ಎಂ. ಎಲ್. ಸಿ. ಗಣಾಚಾರಿಯವರು ಡೆಪ್ಯುಟಿ ಕಮಿಷನರವರಿಗೆ ಇಂಥ ಕಡೆ ನೀರು ಇಲ್ಲ ಬೋರವೆಲ್ಸ್ ತೆಗೆಸಿ ಎಂದು ೧೫-೨-೧೯೭೩ ರಂದು ಕಾಗದ ಬರೆದರು, ೨೨-೩-೧೯೭೩ ರಲ್ಲಿ ಅವರು ಉತ್ತರ ಕೊಡುತ್ತಾರೆ, 'You reffer the matter to Municipal Administrator' ಎಂದು. Municipal Administrator reply ಬರೆಯುತ್ತಾರೆ. 'You approach, Deputy Commissioner' ಎಂದು. ಅವರು ಇವರಿಗೆ, ಇವರು ಅವರಿಗೆ ಬರೆಯುತ್ತಾರೆ. ಎಂ. ಎಲ್. ಸಿ ಮತ್ತು ದೊಡ್ಡ ಸಂಸ್ಥೆಯ ಪ್ರಿನ್ಸಿಪಾಲ್ ಆಗಿರುವವರು ಬರೆದರೆ ಹೀಗೆ ಮಾಡುತ್ತಾರೆ. ಇನ್ನು ಸಾಮಾನ್ಯ ಜನರ ಪರಿಸ್ಥಿತಿ ಏನು ?

ಹಿಂದೆ ಈ ಆಫೀಸರ್ ಟ್ರಾನ್ಸ್‌ಫರ ಸಲುವಾಗಿ ನಾನು ಉಪವಾಸ ಮಾಡಿದ್ದು ನಿಮಗೆ ಸರಿ ಎನಿಸಿಲ್ಲ. ಹೋಗಲಿ ಬಿಡಿ. ಪಿ. ಡಬ್ಲ್ಯು. ಡಿ. ಮಂತ್ರಿಗಳನ್ನು ಕೇಳಿದರೆ ಅವರು ಇದು ಭಾರಿ ನೀರಾವರಿ ಮಂತ್ರಿಗಳಿಗೆ ಸಂಬಂಧಪಟ್ಟದ್ದು ಅವರಿಗೆ ವ್ಯವಸ್ಥೆ ಮಾಡುವುದಕ್ಕೆ ತಿಳಿಸುತ್ತೇವೆ ಎಂದು ಉತ್ತರ ಕೊಟ್ಟರು. ಈ ಕಾಗದವನ್ನು ತಮ್ಮ ಕಡೆಗೆ ಕಳುಹಿಸುತ್ತೇನೆ. ಭಾರಿ ನೀರಾವರಿ ಮಂತ್ರಿಗಳು ಮತ್ತು ರೆವಿನ್ಯೂ ಮಂತ್ರಿಗಳ ಕಡೆ ಕಾಪಿ ಕಳುಹಿಸಿಕೊಡಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ನಿನ್ನೆ ಹೇಳಿದ್ದೇನೆ. ಇವತ್ತು ರಿಪೀಟ್ ಮಾಡಬೇಡಿ ಎಂದು ಹೇಳುತ್ತೀರಿ. ಹೋದ ಸಾರಿ ಹೇಳಿದೆ, ಬೊಂಬಾಯಿಗೆ ಎಲೆಕ್ಟ್ರಿಸಿಟಿ ಕೊಡಬೇಡಿ ಅವರು ನೀರು ಕೊಡುವುದಿಲ್ಲವೆಂದು. ನೀರು ಬರಲಿಲ್ಲ. ದುಡ್ಡು ಕೊಟ್ಟಿದ್ದು ಹೋಯಿತು. ಈ ಸಾರಿ ಎಲೆಕ್ಟ್ರಿಸಿಟಿ ಕೊಡುತ್ತೀರಿ. ಅವರು ನೀರು ಕೊಡುವುದಿಲ್ಲ. ಬಿಜಾಪುರದ ಆಜುಬಾಜಿನ ೬೦ ಮೈಲಿಯೊಳಗೆ ನೀರು ಇಲ್ಲ. ದೇವರು ಮಾಡಿದ್ದು ನಾವು ಮಾಡಿದ್ದು ಅಲ್ಲ. ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲವೆಂದು ನೀವು ಹೇಳುವುದು ಸರಿಯಲ್ಲ. ನೀವು ನೀರು ಕೊಡಲು ಸಾಧ್ಯವಿಲ್ಲದಿದ್ದರೆ ಹೆಂಗಸರನ್ನು, ಮಕ್ಕಳನ್ನು ಮತ್ತು ಬಡವರನ್ನು ಬೇರೆ ಕಡೆಗೆ ಕಳುಹಿಸಿಕೊಡಲು ಎಚ್ಚರಿಕೆ ಕೊಡಿರಿ.

ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).— ಸುರಪುರದ ಮಲ್ಲಪ್ಪನವರಿಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ಸರ್ಕಾರಕ್ಕೂ ಇದೆ. ಅದು ನಾವು ಮಾಡಿದ್ದು ಅಲ್ಲ. ದೈವದತ್ತವಾಗಿ ಮಳಿಹೋಗಿ ಕೃಷ್ಣಾ ನದಿಯಲ್ಲಿ ನೀರು ಇಲ್ಲದೇ ತೊಂದರೆಯಾಗಿರುವುದು ಎಲ್ಲರಿಗೂ ಗೊತ್ತಿದೆ.

ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು).— ದೇವರೇ ಇಲ್ಲ ಎಂದು ನೀವು ಹೇಳುತ್ತೀರಿ

ಶ್ರೀ ಎಚ್. ಎಂ. ಚನ್ನಬಸಪ್ಪ.— ದೇವರು ಇಲ್ಲ ಎನ್ನುವುದು ಅಲ್ಲ. ನನಗೆ ಇದೆ. ಅಂತೂ ನಾನು ಸರ್ಕಾರದ ಪರವಾಗಿ ಉತ್ತರ ಕೊಡುತ್ತಾ ಇರುವಾಗ ಸರ್ಕಾರಕ್ಕೆ ದೇವರು ಇದೆ ಎಂದು ಹೇಳುತ್ತೇನೆ.

ಶ್ರೀ ಎಸ್. ಪುಟ್ಟಸ್ವಾಮಿ.— ನಿಮ್ಮ ಮಂತ್ರಿಮಂಡಲದಲ್ಲಿ ದೇವರ ಮೇಲೆ ನಂಬಿಕೆಯಿಲ್ಲ ಎನ್ನುವ ಮಂತ್ರಿಗಳು ಇರುವಾಗ ಮಂತ್ರಿಗಳ ಬಗ್ಗೆ ಜನಗಳಲ್ಲಿ ವಿಶ್ವಾಸ, ನಂಬಿಕೆ, ಗೌರವ ಎಲ್ಲಿ ಇರುತ್ತದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.— ನಾನು ಸರ್ಕಾರದ ಪರವಾಗಿ ಉತ್ತರ ಕೊಡುತ್ತಾ ಇರುವುದು. ಆದುದರಿಂದ ಸರ್ಕಾರದ ಅಭಿಪ್ರಾಯ ದೇವರು ಇದ್ದಾನೆ ಎನ್ನತಕ್ಕದ್ದು, ದೇವರಲ್ಲಿ ನಂಬಿಕೆ ಇದೆ ಎಂದು ಇಟ್ಟುಕೊಳ್ಳಬೇಕು.

ಶ್ರೀ ಟಿ. ಎಂ. ಮಂಜುನಾಥ್.— ಒಬ್ಬ ಮಂತ್ರಿ ದೇವರಿಲ್ಲ ಎಂದು ಹೇಳುತ್ತಾರೆ, ಒಬ್ಬ ಮಂತ್ರಿ ದೇವರು ಇದ್ದಾನೆ ಎಂದು ಹೇಳುತ್ತೀರಿ. ಅದರ ಬಗ್ಗೆ ಹೊರಗಡೆ ಹೋಗಿ ಪ್ರಾಪಗ್ಯಾಂಡ ಕೂಡ ಮಾಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).— ಈ ಸದನದಲ್ಲಿ ದೇವರು ಇಲ್ಲ.

1-30 P.M.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).— ಮುಖ್ಯ ಮಂತ್ರಿಗಳು ಇದೇ ವಿಷಯದ ಮೇಲೆ ಮಾತನಾಡುತ್ತಾ, ದೇವರ ಪರವಾಗಿಯೂ ಇಲ್ಲ, ದೇವರ ವಿರುದ್ಧವೂ ಇಲ್ಲ, ಸರ್ಕಾರ ಎನ್ನುವುದು ಇನ್ನಾನಿಮೇಟ್ ಅಬ್ಜೆಕ್ಟ್, ಯಾರು ಬೇಕಾದರೂ ನಂಬಿಕೆ ಇಟ್ಟುಕೊಳ್ಳಲಿ, ಯಾರು ಬೇಕಾದರೂ ನಂಬಿಕೆ ಇಟ್ಟುಕೊಳ್ಳದೇ ಇರಲಿ ಎನ್ನುವ ರೀತಿ ಹೇಳಿದರು- ಶ್ರೀಮಾನ್ ಚನ್ನಬಸಪ್ಪನವರು ಹೇಳುತ್ತಾರೆ, ಸರ್ಕಾರಕ್ಕೆ ದೇವರ ಮೇಲೆ ನಂಬಿಕೆ ಎಂದು. ಚೀಫ್ ಮಿನಿಸ್ಟರ್ ಮಾತು ನಂಬಬೇಕೇ, ಚನ್ನಬಸಪ್ಪನವರ ಮಾತು ನಂಬಬೇಕೇ, ಅರ್ಥವಾಗುವುದಿಲ್ಲ ತಾಯಿ, ನನಗೆ ರಕ್ಷಣೆ ಕೊಡಬೇಕು.

ಅಧ್ಯಕ್ಷರು.— ನಾನು ಹೇಳಿದ ಹಾಗೆ ಕೇಳಿದರೆ ನಿಮಗೆ ರಕ್ಷಣೆ ಸಿಗುತ್ತದೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಚ್. ಎಂ. ಚನ್ನಬಸಪ್ಪ.— ನೀರನ್ನು ಹೋದ ತಡವೆ ಬಿಟ್ಟಿದ್ದಕ್ಕೂ, ಈ ತಡವೆ ಬಿಟ್ಟಿದ್ದಕ್ಕೂ ವ್ಯತ್ಯಾಸವಿದೆ. ಹೋದ ತಡವೇ ನೀರು ನಮಗೆ ಬರಲೇ ಇಲ್ಲ. ಕಾರಣ, ಮಹಾರಾಷ್ಟ್ರದಲ್ಲಿ ಇರತಕ್ಕ ಲಿಫ್ಟ್ ಇರಿಗೇಟರ್ಸ್ ಬಿಟ್ಟ ನೀರು ಉಪಯೋಗಮಾಡಿ ನೀರು ನಮಗೆ ತಲುವುವುದೇ ಕಷ್ಟವಾಯಿತು. ಅವರನ್ನು ಹತೋಟೆ ಮಾಡುವುದು ಕಷ್ಟವಾಯಿತು. ಈ ಸಾರಿ ಮಹಾರಾಷ್ಟ್ರ ಸರ್ಕಾರದವರು ನೀರನ್ನು ಉಪಯೋಗ ಮಾಡದಂತೆ ಪ್ರತಿಬಂಧಕಮಾಡಿ ಮೈಸಾಳ ಬೌಂಡರಿಯಲ್ಲಿ ಅಳತೆಮಾಡಿ ನೀರು ಬಿಟ್ಟಿದ್ದಾರೆ. ನೀರು ಬರುತ್ತಾ ಇದೆ. ನದಿಯಲ್ಲಿ ಒಣಗಿ ಹೋಗಿರುವುದರಿಂದ ಅಲ್ಲಲ್ಲಿ ಹಳ್ಳಗಳು, ಕೊಳ್ಳಗಳು, ಫಿಟ್ಸ್ ಇರುವುದರಿಂದ ಅವು ತುಂಬುತುಂಬಿ ಬರಬೇಕು. ಮೊನ್ನೆಯ ದಿವಸ ಹೇಳಿದಂತೆ, ೧೨ ನೇ ತಾರೀಖು ಬೆಳಿಗ್ಗೆ ೭ ಗಂಟೆ ಹೊತ್ತಿಗೆ ಮೈಸಾಳದಿಂದ ೩೫ ಮೈಲಿ ಬಂದಿದೆ. ಈವೊತ್ತು ಎಷ್ಟು ಬಂದಿದೆ ಎನ್ನುವ ವಿಚಾರವನ್ನು ತಿಳಿಸಲಿಕ್ಕೆ ವ್ಯವಸ್ಥೆಮಾಡಿದೆ. ನೀರು ಬರತಕ್ಕದ್ದು ನಿಧಾನ ಎನ್ನುವುದು ಸ್ವಾಭಾವಿಕ. ಬಿಜಾಪುರದಲ್ಲಿ ನೀರಿಗೆ ತೊಂದರೆ ಯಾಗಿದೆ ಎನ್ನುವ ವಿಷಯವನ್ನು ಮಾನ್ಯ ಸದಸ್ಯರು ಬಹಳ ಕಳಕಳಿಯಿಂದ ತಿಳಿಸಿದರು. ಈಗ ನವ್ಮಲ್ಲಿರಿಗ್ಸೆ ಕೂಡ ಎಷ್ಟುಪ್ರಮಾಣದಲ್ಲಿ ಅವಶ್ಯಕವೋ, ಅಷ್ಟು ಪ್ರಮಾಣದಲ್ಲಿ ಇಲ್ಲ. ಕೊಯ್ನದಿಂದ ಬಿಟ್ಟರತಕ್ಕ ನೀರು ಬರತಕ್ಕದ್ದು ನಿಧಾನವಾಗುತ್ತಿದೆ. ಅದನ್ನು ತೀವ್ರಗೊಳಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತಕ್ಷಣ ತೆಗೆದುಕೊಳ್ಳುತ್ತೇವೆ. ಒಂದು ವೇಳೆ ಕೃಷ್ಣಾನದಿಯಿಂದ ನೀರನ್ನು ಒದಗಿಸುವುದು ಅಸಾಧ್ಯವಾದರೆ, ಬೇರೆ ಮಾರ್ಗ ಇಲ್ಲದೆಹೋದರೆ, ಕೊನೆಗೆ ಟ್ರಕ್‌ಗಳಲ್ಲಿ ಮತ್ತು ಟ್ಯಾಂಕರಗಳಲ್ಲಿ ನೀರನ್ನು ಸರಬರಾಜುಮಾಡಿ, ತೊಂದರೆಯಾಗದಂತೆ ನೋಡಿಕೊಳ್ಳುವುದಕ್ಕೆ ಆಜ್ಞೆ ಮಾಡುತ್ತೇನೆ, ಇಷ್ಟು ಮಾತ್ರ ಭರವಸೆ ಕೊಡುತ್ತೇನೆ.

ಶ್ರೀ ಪಿ. ಎಂ. ಬಂಗಿ.— ಕೃಷ್ಣ ನದಿಯೊಳಗೆ ೧೦—೨೦ ಮೈಲಿ ಬ್ಯಾರೇಜ ಕಟ್ಟಿ ನಿರಂತರವಾಗಿ ನೀರು ದೊರೆಯುವ ವ್ಯವಸ್ಥೆ ಮಾಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.— ತತ್ವಶಃ ಸರ್ಕಾರ ಅದನ್ನು ಒಪ್ಪಿಕೊಂಡಿದೆ. ಈಗ ಏನು ಸ್ಥಿತಿಗತಿ ಬಂದಿದೆ, ಆದು ಮುಂದೆ ಬರಬಾರದು. ಅಲ್ಲಲ್ಲಿ ಬಂಡಾರಗಳನ್ನು ಎಬ್ಬಿಸಿ, ಮಳೆಗಾಲ ಬಂದಾಗ ಅಲ್ಲಿ ಶಾಶ್ವತವಾಗಿ ನೀರು ನಿಂತು, ಬೇಸಿಗೆಯಲ್ಲಿ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಇದನ್ನು ತತ್ವಶಃ ಒಪ್ಪಿ ಆಜ್ಞೆ ಮಾಡಿದ್ದೇವೆ. ಟೆಂಪರರಿ ಬಂಡು ಹಾಕಿ ಮುಂದೆ ಒಂದೊಂದನ್ನು ಪರ್ಮನೆಂಟ್ ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡುತ್ತಿದೆ.

MATER UNDER RULE 312

Re : Strike of the House Surgeons

†ಶ್ರೀ ಎಂ. ಎಸ್. ಕೃಷ್ಣನ್.— ಮೈಸೂರು ರಾಜ್ಯದ ಹೌಸ ಸರ್ಜನ್ಸ್ ಮೊನ್ನೆಯ ದಿವಸದಿಂದ ಉಪವಾಸ ವ್ರತ ಮಾಡುತ್ತಿದ್ದಾರೆ. ಈಗ ಅದನ್ನು ನಿಲ್ಲಿಸಿ ಇಂಡಿಫೆನೇಟ್ ಸ್ಟ್ರೈಕ್ ಮಾಡಬೇಕು ಎಂದು ಹೊರಟಿದ್ದಾರೆ. ಮುಖ್ಯವಾಗಿ ಸ್ಟೈಫಂಡ್ ಬೇರೆಕಡೆ ಎಷ್ಟು ಕೊಟ್ಟಿದ್ದಾರೆಯೋ ಅದಕ್ಕಿಂತ ಕಡಿಮೆ ಕೊಡುತ್ತಿದ್ದಾರೆ. ಇಲ್ಲಿ ರೂ. ೧೫೦ ಕೊಡುತ್ತಿದ್ದಾರೆ. ಬೇರೆ ಕಡೆ ೨೫೦–೩೦೦ ರೂಪಾಯಿ ಕೊಡುತ್ತಿದ್ದಾರೆ. ವಸತಿ ಸೌಕರ್ಯ ಮತ್ತು ಇತರ ಸೌಕರ್ಯ ಕೊಡಬೇಕು ಎನ್ನುವ ಹೌಸ ಸರ್ಜನರ ಕೇಳಿಕೆ ಅನೇಕ ದಿವಸದಿಂದ ಸರ್ಕಾರದ ಮುಂದೆ ಇದೆ. ಸರ್ಕಾರ ಇದರ ಬಗ್ಗೆ ಗಮನ ಕೊಟ್ಟಿಲ್ಲ. ಅದರ ಬಗ್ಗೆ ಏನಾದರೂ ಕ್ರಮ ತೆಗೆದು ಕೊಳ್ಳಬೇಕು ಎಂದು ಮೊನ್ನೆಯ ದಿವಸ ಉಪವಾಸವ್ರತ ಮಾಡಿದ್ದಾರೆ. ರಾಜ್ಯಾದ್ಯಂತ ಈಗ ಸ್ಟ್ರೈಕ್ ಮಾಡುವದಕ್ಕೆ ಹೊರಟಿದ್ದಾರೆ. ಇದು ಮುಖ್ಯವಾದ ವಿಷಯ ಗಹನವಾದ ವಿಷಯ. ಮಾನ್ಯ ಮಂತ್ರಿಗಳು ಇಲ್ಲೇ ಇದ್ದಾರೆ. ಹ್ಯೂಮನ್ ಕನಸಿಡರೇಷನ್ ಇರಬೇಕು ಎಂದು ಅವರ ಅಸೋಸಿಯೇಷನ್ ಪ್ರೆಸಿಡೆಂಟ್ ಹೇಳಿದ್ದಾರೆ. ಅದು ಬೆಳಿಗ್ಗೆ ಪತ್ರಿಕೆಯಲ್ಲಿ ಬಂದಿದೆ. ಸರ್ಕಾರ ಮಧ್ಯೆ ಪ್ರವೇಶಮಾಡಿ, ಇದನ್ನು ಇತ್ಯರ್ಥ ಮಾಡಬೇಕು. ಮಾನ್ಯ ಮಂತ್ರಿಗಳು ಇದರ ಬಗ್ಗೆ ಸ್ಟೇಟ್‌ಮೆಂಟ್ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.— ಅಷ್ಟೇ ಅಲ್ಲದೆ ಡಾಕ್ಟರ್ಸ್‌ಗೆ ೧೨೦ ರೂಪಾಯಿ ಕೊಡುತ್ತಾರೆ. ಅದೇ ನರ್ಸಗೆ ೧೪೦–೨೦೦ ರೂಪಾಯಿ ಕೊಡುತ್ತಾರೆ. ಇದು ಮುಖ್ಯವಾದ ವಿಷಯ. ಈ ತಾರತಮ್ಯವನ್ನು ಹೋಗಲಾಡಿಸಬೇಕು.

ಶ್ರೀ ವಾಟಾಳ ನಾಗರಾಜ್ (ಚಾಮರಾಜಪೇಟೆ).—ನಾನು ಶ್ರೀ ಶಿದ್ದವೀರಪ್ಪನವರ ಇಲಾಖೆ ವಿರುದ್ಧ ಯಾರೂ ಸತ್ಯಾಗ್ರಹ ಮಾಡುವದಿಲ್ಲ ಎಂದು ತಿಳಿದುಕೊಂಡಿದ್ದೆ. ಆ ರೀತಿ ಸತ್ಯಾಗ್ರಹ ಯಾವುದೂ ಇಲ್ಲದೆ ಇಲಾಖೆ ನಡೆಸಿಕೊಂಡು ಹೋಗುತ್ತಾರೆ ಅಂತ ನಂಬಿಕೆ ಇತ್ತು. ಈಗ ರಾಜ್ಯಾದ್ಯಂತ ಸತ್ಯಾಗ್ರಹಮಾಡುತ್ತಿರುವುದರಿಂದ ನಿಮ್ಮ ಕೀರ್ತಿಗೆ ಕಳಂಕ ಬರುತ್ತದೆ. ಇದರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡಬೇಕು ಎಂದು ಒತ್ತಾಯಮಾಡುತ್ತೇನೆ.

†ಶ್ರೀ ಎಚ್. ಸಿದ್ದವೀರಪ್ಪ (ಆರೋಗ್ಯಶಾಖೆಯ ಮಂತ್ರಿಗಳು).— ಸನ್ಮಾನ್ಯ ಅಧ್ಯಕ್ಷರೇ, ಶ್ರೀ ಮಾನ್ಯ ಕೃಷ್ಣನ್‌ರವರು ಮತ್ತು ಇತರ ಮಾನ್ಯ ಸ್ನೇಹಿತರುಗಳು ಹೌಸ್ ಸರ್ಜನ್ಸ್ ವಿಚಾರದಲ್ಲಿ ಇತ್ತೀಚೆಗೆ ಪತ್ರಿಕೆಗಳಲ್ಲಿ ಬರುತ್ತಾ ಇರತಕ್ಕ ವಿಷಯದಲ್ಲಿ ಒಂದು ಹೇಳಿಕೆಯನ್ನು ಸರ್ಕಾರ ಮಾಡಬೇಕು ಎಂದು ಕೇಳಿದ್ದಾರೆ. ಕೆಲವು ದಿವಸಗಳ ಕೆಳಗೆ ಕೆಲವರು ಹೌಸ್ ಸರ್ಜನ್ಸ್ ಬಂದು ನನ್ನನ್ನು ಭೇಟಮಾಡಿ ಮನವಿಯನ್ನು ಸಲ್ಲಿಸಿ, " ಕೂಡಲೇ ನೀವು ವಿಚಾರಮಾಡಬೇಕು, ನಮಗೆ ಬಹಳ ತೊಂದರೆ ಇದೆ, ಈ ತೊಂದರೆಗಳನ್ನೆಲ್ಲ ಬಗೆಹರಿಸುವುದಕ್ಕೆ ಪ್ರಯತ್ನಮಾಡಬೇಕು" ಎಂದು

ನನಗೆ ಕೇಳಿದರು. ನಾನು ಅವರಿಗೆ ಹೇಳಿದೆ, " ಇದು ಬಹಳ ಗಹನವಾದ ವಿಷಯ, ಬರೀ ನಾನು ಪ್ರಶ್ನೆ ಬಗೆಹರಿಸುವುದಾದರೆ ಮಾಡಬಹುದು, ಕೆಲವು ಫೈನಾನ್ಸಿಯಲ್ ಇಂಪ್ಲಿಕೇಶನ್ ಇದೆ, ಇದು ಹಣಕಾಸಿನ ವಿಚಾರ ಇರುವುದರಿಂದ ನಾವು ಸರ್ಕಾರದ ವರು ಕ್ಯಾಬಿನೆಟ್‌ನಲ್ಲಿ ಯೋಜನೆ ಮಾಡಬೇಕು, ಈ ವಿಷಯದಲ್ಲಿ ನಾನು ಅತ್ಯಂತ ಸಹಾನುಭೂತಿಯಿಂದ ಇರುತ್ತೇನೆ." ಎಂದು ಹೇಳಿದೆ. ಅದಕ್ಕೆ ಅವರು 'ಬರೀ ಸಹಾನುಭೂತಿ ಇದ್ದರೆ ಸಾಲದು, ಅದನ್ನು ಕಾರ್ಯಗತ ಮಾಡುವ ಸ್ಥಿತಿಯಲ್ಲಿರ ಬೇಕು' ಎಂದು ಹೇಳಿದರು ಹ್ಯೂಮನ್ ಕನಸಿಡರೇಷನ್ ದೃಷ್ಟಿಯಿಂದ ನೀವು ಸ್ಟೈಕ್ ಮಾಡಬಾರದು. ೬-೭ ವರ್ಷದಿಂದ ಈ ಪ್ರಶ್ನೆ ಇದೆ ೬-೭ ವರ್ಷದ ಪ್ರಶ್ನೆಯನ್ನು ನನ್ನ ಮುಂದೆ ಇವತ್ತು ಇಟ್ಟಿದ್ದೀರಿ, ವಿಚಾರಮಾಡುತ್ತೇನೆ, ಅಜಿಟೇಷನ್‌ಗೆ ಹೋಗ ಬೇಡಿ, ಸ್ಟೈಕ್ ಮಾಡಿದರೆ ನಿಮ್ಮ ಪ್ರೊಫೆಷನ್‌ಗೆ ಕಳಂಕ ಬರುತ್ತದೆ. ಇದನ್ನು ಮಾಡಬಾರದು, ಎಂದು ಅವರನ್ನು ಕೇಳಿಕೊಂಡೆ ಅವರು ಹೇಳಿದ್ದನ್ನು ವಿಚಾರಮಾಡಿ ನೋಡಿದ್ದರಲ್ಲಿ ಇವತ್ತು ನಾನು ವರ್ಕಪ್ ಮಾಡಿಸಿದ್ದರಲ್ಲಿ ಅವರು ಹೇಳಿದ ಎಲ್ಲ ಬೇಡಿಕೆ ಗಳನ್ನು ಈಡೇರಿಸಬೇಕಾದರೆ ವರ್ಷಕ್ಕೆ ಸರ್ಕಾರದವರಿಗೆ ೫೦ ಲಕ್ಷ ರೂಪಾಯಿ ಬೇಕಾ ಗುತ್ತದೆ. ೮-೧೦ ಅಂಶಗಳನ್ನು ಅವರು ಹಾಕಿಕೊಟ್ಟಿದ್ದಾರೆ. ಇದನ್ನು ಸೆಕ್ರೆಟರಿ ಯೇಟ ಲೆವಲಿನಲ್ಲಿ ಎಕ್ಸಾಮಿನ್ ಮಾಡಿಸುತ್ತಿದ್ದೇನೆ. ನಾವು ಕೊಡತಕ್ಕ ರೂ. ೧೫೦ ಸ್ಟೈಫಂಡ್ ಬಹಳ ಕಡಿಮೆ, ಅದನ್ನು ಹೆಚ್ಚಿಗೆ ಮಾಡಿಕೊಡಬೇಕು ಎಂದು ಹೇಳುತ್ತಾರೆ.

ಈವೊತ್ತು ಒಂದು ವಿಷಯ ಮಾತ್ರ ಈ ಸಭೆ ಗಮನದಲ್ಲಿಟ್ಟುಕೊಳ್ಳಬೇಕು. ಅದು ಏನೆಂದರೆ ಕಂಪಲ್ಸರಿ ರೊಟೇಟಿಂಗ್ ಹೌಸಮನಷಿಪ್ ಇದು ಏತಕ್ಕೆ ಬಂತು? ಇದು ಬರುವುದಕ್ಕೆ ಕಾರಣವೇನು? ಇದನ್ನು ನೋಡಿದರೆ ಆ ಟ್ರೈನಿಂಗ್ ಆಗದೆ ಇವರು ಗ್ರಾಡ್ಯುಯೇಷನ್ ಕಂಪ್ಲೀಟ್ ಆಗುವದಿಲ್ಲ. ಫ್ರೀ ರಿಜಿಸ್ಟ್ರೇಶನ್ ಟ್ರೈನಿಂಗ್ ಮೊದಲು ಏನು ಇತ್ತು ಅದು ಈವೊತ್ತಿನ ದಿವಸ ಫುಲ್ ರಿಜಿಸ್ಟ್ರೇಷನ್ ಮಾಡಿಕೊಳ್ಳ ಬೇಕಾದರೆ ಇವರು ಕಂಪಲ್ಸರಿ ರೊಟೇಟಿಂಗ್ ಹೌಸಮನಷಿಪ್ ಮಾಡಬೇಕು. ದಿಸ್ ಈಸ್ ಎ ಪಾರ್ಟ ಆಫ್ ದಿ ಕೆರಿಕುಲಮ್. ಎಂ ಬಿ. ಬಿ. ಎಸ್. ಡಿಗ್ರಿ ತೆಗೆದುಕೊಳ್ಳ ಬೇಕಾದರೆ ಇದನ್ನು ಮಾಡಲೇಬೇಕು. ಈಗ ಬೇರೆ ರಾಜ್ಯದಲ್ಲಿ ಏನು ಮಾಡಿದ್ದಾರೆ ಅದನ್ನೂ ನೋಡಬೇಕು. ಹುಡುಗರಿಗೆ ತೊಂದರೆ ಇದೆ, ಅವರು ಇದನ್ನು ೪-೪½ ವರ್ಷ ಕಷ್ಟಪಟ್ಟು ಓದಬೇಕು, ಒಪ್ಪಿಕೊಳ್ಳುತ್ತೇನೆ. ಈಗ ವರ್ಷಕ್ಕೆ ೧೫೦೦-೧೬೦೦ ಜನ ಡಾಕ್ಟರ್ಸ್ ಹೊರಗೆ ಬರುತ್ತಿದ್ದಾರೆ. ಆದರೆ ಸ್ಯಾಂಕ್ಷನ್ಡ್ ಪೋಸ್ಟ್ ಇರುವುದು ೬೮೦-೭೦೦ ಮಾತ್ರ. ಕಂಪಲ್ಸರಿ ರೊಟೇಟಿಂಗ್ ಹೌಸ್‌ಮನ್‌ಷಿಪ್ ಏನು ಇದೆ. ಅದರಲ್ಲಿ ಸ್ವಲ್ಪ ಅನ್ಯಾಯವಾಗಿದೆ. ಕೊಡುವುದಾದರೆ ಎಲ್ಲರಿಗೂ ಕೊಡಬೇಕು ಇಲ್ಲದೇ ಹೋದರೆ ಯಾರಿಗೂ ಇಲ್ಲ. ಒಬ್ಬೊಬ್ಬರಿಗೆ ಒಂದೊಂದು ರೀತಿಯಾಗಿ ಡಿಸ್ಕ್ರಿಮಿನೇಷನ್ ಮಾಡತಕ್ಕಂಥಾದ್ದು ಸರಿಯಲ್ಲ. ಇದು ನನಗೆ ಮನವರಿಕೆ ಯಾಗಿದೆ. ಇದನ್ನು ಸೆಟರೈಟ್ ಮಾಡುತ್ತೇವೆ. ಒಬ್ಬೊಬ್ಬರಿಗೆ ಒಂದೊಂದು ರೀತಿ

ಮಾಡಬಾರದು. ಈ ವರ್ಷ ೮೦೦ ಡಾಕ್ಟರ್ಸ್ ಬರಬಹುದು, ಮುಂದಿನ ವರ್ಷ ೯೦೦ ಡಾಕ್ಟರ್ಸ ಹೊರಗೆ ಬರಬಹುದು. ಬಂದವರಿಗೆಲ್ಲಾ ಕೊಡಬೇಕು. ಕಂಪಲ್ಸರಿ ರೊಟೇಟಿಂಗ್ ಹೌಸಮನ್‌ಷಿಪ್ ಅನ್ನುವದು. ಇದು ವನ್ ಆಫ್ ದಿ ಕೋರ್ಸಸ್ ಎಂದು ತಿಳಿದುಕೊಂಡು ಮಾಡಬೇಕು. ಆ ಧೋರಣೆಯನ್ನು ತಾಳಿ ಎಲ್ಲರಿಗೂ ಕೊಡಬೇಕು, ಇಲ್ಲದಿದ್ದರೂ ಯಾರಿಗೂ ಕೊಡಬೇಕಾಗಿಲ್ಲ. ಈ ವಿಚಾರದಲ್ಲಿ ಸರ್ಕಾರ ಯೋಚನೆ ಮಾಡುತ್ತಿದೆ.

ಆಮೇಲೆ ಕಂಪಲ್ಸರಿ ರೊಟೇಟಿಂಗ್ ಹೌಸ್‌ಮನ್‌ಷಿಪ್ ಅನ್ನುವದು ಮೊದಲು ಇತ್ತು. ಅವರು ಪೋಸ್ಟ ಗ್ರಾಜ್ಯುಯೇಷನ್‌ಗೆ ಹೋಗಬೇಕಾದರೆ ೫ ವರ್ಷ ಟ್ರೈನಿಂಗ ಆದಮೇಲೆ ಹೋಗಬೇಕಾಗಿತ್ತು. ಈಗ ಒಂದು ವರ್ಷವಾದರೆ ಸಾಕು. ಅವರು ಪೋಸ್ಟ್ ಗ್ರಾಜ್ಯುಯೇಷನ್ ಸ್ಟಡೀಸ್‌ಗೆ ಸೇರಿಸಿಕೊಳ್ಳಬಹುದು ಎಂದು ಮಾಡಿದ್ದೇವೆ. ಈ ವಿಚಾರದಲ್ಲಿ ಒತ್ತಡ ಇದೆ ಕಂಪಲ್ಸರಿ ಏನೂ ಇಲ್ಲ. ಕಂಪಲ್ಸರಿ ರೊಟೇಟಿಂಗ್ ಹೌಸಮನ್‌ಷಿಪ್ ಕೊಡಬೇಕು ಎಂತಿಲ್ಲ. ಮದ್ರಾಸನಲ್ಲಿ ಕಂಪಲ್ಸರಿ ರೊಟೇಟಿಂಗ ಹೌಸಮನ್‌ಷಿಪ್‌ಗೆ ರಿಜಿಸ್ಟ್ರೇಶನ್ ಆಗುವದರಿಂದಲೇ ಫೀಸ್ ತೆಗೆದುಕೊಳ್ಳುತ್ತಾರೆ. ಇಲ್ಲಿ ಈ ಕೋರ್ಸ್‌ಗೆ ಫೀಸ್ ತೆಗೆದುಕೊಳ್ಳುತ್ತಾ ಇಲ್ಲ. ಆದುದರಿಂದ ಈವೊತ್ತು ಇದರಲ್ಲಿ ಬಹಳ ಅಸ್ತವ್ಯಸ್ಥೆಯಾಗಿದೆ. ಇದನ್ನು ಎಕ್ಸಾಮಿನ್ ಮಾಡುತ್ತಿದ್ದೇವೆ. ಇದನ್ನು ಎಕ್ಸಾಮಿನ್ ಮಾಡಬೇಕಾದರೆ ಅದಕ್ಕೆ ಸ್ವಲ್ಪ ಕಾಲಾವಕಾಶ ಬೇಕು. ಅವನ್ನು ನೋಡಿ ಅವರಿಗೆ ಅನ್ಯಾಯವಾಗದ ರೀತಿಯಲ್ಲಿ ಬಗೆಹರಿಸಬೇಕು ಎಂದು ಯೋಚನೆ ಮಾಡುತ್ತಿದ್ದೇವೆ. ಕಂಪಲ್ಸರಿ ರೊಟೇಟಿಂಗ್ ಹೌಸ್‌ಮನಷಿಪ್ ವಿಚಾರದಲ್ಲಿ ಈವೊತ್ತಿನ ದಿವಸ ಅವರು ಏನು ಎಜಿಟೇಶನ್ ಮಾಡುತ್ತಾ ಇದ್ದಾರೆ ಅವರಲ್ಲಿ ನನ್ನ ಕಳಕಳಿ ಮನವಿ ಏನಂದರೆ ಅವರು ಈ ರೀತಿ ಮಾಡಿದರೆ ಆಸ್ಪತ್ರೆಗಳಲ್ಲಿ ಕೆಲಸಕ್ಕೆ ಬಹಳ ತೊಂದರೆಯಾಗುತ್ತದೆ. ಆಸ್ಪತ್ರೆಗಳಲ್ಲಿ ಅವರನ್ನು ನಂಬಿಕೊಂಡಿರತಕ್ಕಂಥ ಪೇಷೆಂಟ್ಸಗೆ ತೊಂದರೆಯಾಗುತ್ತದೆ. ಈ ರೀತಿ ಮಾಡಿ ಬಡ ಜನರನ್ನು ತೊಂದರೆ ಮಾಡುವುದು ಬೇಡ. ಈ ಸಂದರ್ಭದಲ್ಲಿ ನಾನು ಅವರನ್ನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಮತ್ತು ಈ ಸಭೆಯಲ್ಲಿ ಮತ್ತು ನನ್ನ ಸ್ನೇಹಿತರಲ್ಲಿ ಕೇಳಿಕೊಳ್ಳುತ್ತೇನೆ. ಇದನ್ನು ಯಾವ ರೀತಿಯಾಗಿ ಬಗೆಹರಿಸಬೇಕು ಎನ್ನುವುದನ್ನು ವಿಚಾರ ಮಾಡುತ್ತಿದ್ದೇವೆ. ಆದುದರಿಂದ ಅವರು ಪ್ರಾರಂಭ ಮಾಡಿರತಕ್ಕಂಥ ಸ್ಟ್ರೈಕನ್ನು ನಿಲ್ಲಿಸಬೇಕು ಎಂದು ನನ್ನ ಸ್ನೇಹಿತರು ಅವರಿಗೆ ತಿಳಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಅಧ್ಯಕ್ಷರೇ, ಈ ಎಂ. ಬಿ. ಬಿ. ಎಸ್. ಕೋರ್ಸಸ್ ಮುಗಿಯಬೇಕಾದರೆ ಈ ಕಂಪಲ್ಸರಿ ರೊಟೇಟಿಂಗ್ ಹೌಸ್‌ಮನ್‌ಷಿಪ್ ಮುಗಿಯಬೇಕು ಎಂದು ಹೇಳುತ್ತೀರಿ. ಇದನ್ನು ಮಾಡಿದರೇನೇ ಅವರು ಫುಲ್ ಫ್ಲೆಡ್ಜ್ ಡಿಗ್ರಿ ತೆಗೆದುಕೊಳ್ಳಬೇಕು ಎಂದು ಹೇಳುತ್ತೀರಿ. ಅವರು ಈ ಕೆಲಸ

ವನ್ನು ಮಾಡದೇ ಡಿಗ್ರಿ ಕೊಡುವುದಿಲ್ಲ. ಮತ್ತು ಅವರು ಸ್ಟ್ರೈಕ್ ಮಾಡಿದರೆ ಸಾರ್ವ ಜನಿಕರಿಗೆ ತೊಂದರೆಯಾಗುತ್ತದೆ ಎಂದು ಹೇಳುತ್ತೀರಿ. ಇವರ ನೇಚರ ಆಫ್ ವರ್ಕ್ ನೋಡಿದರೆ ಡಾಕ್ಟರ್ ತರಹವೇ ಕೆಲಸ ಮಾಡಬೇಕು ಎಂದು ನಾನು ತಿಳಿದು ಕೊಂಡಿದ್ದೇನೆ. ಅವರು ಮಾಡತಕ್ಕಂಥ ಕೆಲಸ ವಿದ್ಯಾರ್ಥಿಗಳ ಕೆಲಸ ಅಲ್ಲ, ಡಾಕ್ಟರ್ ಕೆಲಸ ಮಾಡುತ್ತಿದ್ದಾರೆ. ಈ ತರಹ ಕೆಲಸ ಮಾಡುತ್ತಿರುವ ಕಂಪಲ್ಸರಿ ರೊಟೇ ಟಿಂಗ್ ಹೌಸ್‌ಮನ್‌ಷಿಪ್‌ಗೆ ನಿಗ್ಗರ್ಲಿ ಸ್ಟೈಪೆಂಡ್ ಕೊಟ್ಟರೆ ಹೇಗೆ? ಆದುದರಿಂದ ನಾನು ಕೇಳುವುದು ಏನೆಂದರೆ ಅಕ್ಕಪಕ್ಕದ ರಾಜ್ಯದಲ್ಲಿ ಏನು ಅನುಷ್ಠಾನದಲ್ಲಿ ಇದೆ ಅದೇ ರೀತಿ ಇವರಿಗೂ ಸಹಾಯ ಮಾಡುವುದಕ್ಕೆ ನಿಮ್ಮ ವೈಯಕ್ತಿಕ ಅಭಿಪ್ರಾಯ ಏನು ಎಂದು ತಿಳಿಸುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.— ನಾನು ವಿಚಾರಮಾಡಿದೆ. ಯಾವುದೂ ಕೂಡ ವೈಯಕ್ತಿಕ ಅಭಿಪ್ರಾಯ ಹೇಳುವುದಕ್ಕೆ ಈಗ ನಾನು ತಯಾರಾಗಿಲ್ಲ. ನೀವು ಹೇಳ ತಕ್ಕಂಥ ರೀತಿಯಲ್ಲಿ ನಾವು ಇಲ್ಲ. ನಾನು ಲಾಯರ್ ಆಗಬೇಕಾದರೆ ಸೀನಿಯರ್ ಲಾಯರ್ ಜೊತೆ ಸೇರಿ ಕೆಲಸ ಮಾಡಿದೆ ಅಲ್ಲದೆ ನಾನು ಒಂದು ವರ್ಷ ಮನೆಯಿಂದಲೇ ದುಡ್ಡು ತರಿಸಿಕೊಂಡು ಕಲಿತುಕೊಳ್ಳಬೇಕಾಯಿತು. ಹಾಗೆಯೇ ಸೂಜಿ ಹಾಕ ಬೇಕಾದರೂ ಕೂಡ ದೊಡ್ಡ ದೊಡ್ಡ ಡಾಕ್ಟರುಗಳ ಜೊತೆ ಸೇರಿ ಕಲಿತುಕೊಳ್ಳಬೇಕು. This is a part of the Course. ಹಿಂದೆ ಗುರುಕುಲದಲ್ಲಿ ಯಾವ ರೀತಿ ಅಭ್ಯಾಸ ಮಾಡುತ್ತಿದ್ದರೋ ಆ ರೀತಿ ಅಭ್ಯಾಸ ಮಾಡಬೇಕು. ಈವಾಗ ಅವರಿಗೆ ೧೫೦ ರೂ ಕೊಡುವುದು ಅವರ ಜೀವನಕ್ಕೆ ಸಾಕಾಗುವುದಿಲ್ಲ ಎನ್ನುವುದನ್ನು ಒಪ್ಪಿ ಕೊಳ್ಳೋಣ. ಹಾಗೆ ಒಪ್ಪಿಕೊಂಡರೂ ಕೂಡ ೧೫೦ ರೂಪಾಯಿ ಅಲ್ಲ ೨೦೦ ರೂಪಾಯಿ ಆದರೂ ಸಾಲುವುದಿಲ್ಲ. ಆದರಲ್ಲೂ ಅವರು ಕಚ್ಚುವ ಅಭ್ಯಾಸ ಕಲಿತುಕೊಂಡಿದ್ದರೆ ಎಷ್ಟೇ ದುಡ್ಡು ಇದ್ದರೂ ಸಾಕಾಗುವುದಿಲ್ಲ. ಈವೊತ್ತು ಎಲ್ಲರಿಗೂ ತೊಂದರೆ ಇದೆ. ನಾನು ಈವೊತ್ತು ಒಂದು ಸವಾಲು ಹಾಕುತ್ತೇನೆ. ಈವೊತ್ತು ೧೫೦ ರೂಪಾಯಿ ಏನು ಕೊಡುತ್ತಾ ಇದ್ದೇವೋ ಅದನ್ನು ಹೆಚ್ಚು ಮಾಡಿ ಎಂದು ಹೇಳುತ್ತಿದ್ದಾರೆ. ಹೀಗೆ ಎಲ್ಲವನ್ನೂ ಹೆಚ್ಚು ಮಾಡಿಕೊಂಡು ಹೋಗುವುದಾದರೆ ಈ ಸಮಾಜವಾದದಲ್ಲಿ ಕೊನೆಗಾಣುವುದು ಹೇಗೆ? ಇದು ೬ ವರ್ಷಗಳಿಂದಲೂ ತೊಂದರೆ ಇದೆ ಎಂದು ಹೇಳುತ್ತಾರೆ. ಈ ರೀತಿ ೬ ವರ್ಷದಿಂದಲೂ ಸುಧಾರಿಸಿಕೊಂಡಿರತಕ್ಕ ವರು ಇನ್ನು ಸ್ವಲ್ಪ ಸುಧಾರಿಸಿಕೊಳ್ಳಿ ಎಂದು ಹೇಳಿದ್ದೇನೆ. I do not think they can get a more sympathetic health minister than myself. Let them not harden my mind. I want them to be very very sympathetic towards the patients and let them go back to their duties.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಪಕ್ಕದ ಮದ್ರಾಸ್‌ನವರು ಈ ಕಂಪಲ್ಸರಿ ರೊಟೇಟಿಂಗ್ ಹೌಸ್‌ಮನ್‌ಷಿಪ್‌ಗೆ ರಿಜಿಸ್ಟ್ರೇಷನ್ ಆಗುವವರಿಂದಲೇ ಫೀಸ್ ತೆಗೆದು ಕೊಳ್ಳುತ್ತಾರೆ ಎಂದು ಹೇಳಿದಿರಿ. ಆದರೆ ದಕ್ಷಿಣ ವಲಯದಲ್ಲಿ ಯಾರು ಯಾರು

ಏನು ಕೊಟ್ಟಿದ್ದಾರೆ ಎಂದು ಹೇಳಲಿಲ್ಲಾ. ಮದ್ರಾಸ್‌ನವರದ್ದು ಒಬ್ಬರದ್ದು ಮಾತ್ರ ಹೇಳಿದಿರಿ. ನಾನು ತಮ್ಮನ್ನು ಕೇಳುತ್ತೇನೆ. ಪಕ್ಕದಲ್ಲಿ ಬೇರೆ ಬೇರೆ ರಾಜ್ಯಗಳು ಏನು ಇವೆ. ಕೇರಳ, ಆಂಧ್ರ, ಮಹಾರಾಷ್ಟ್ರ ಏನು ಇವೆ ಅಲ್ಲಿ ಏನು ಕೊಡುತ್ತಿದ್ದಾರೆ, ಅದನ್ನು ಸುತ್ತಿಕೊಂಡು ಬಂದು ನೋಡಿದರೆ ಗೊತ್ತಾಗುತ್ತದೆ. ಅಲ್ಲೆಲ್ಲಾ ೨೫೦ ರೂಪಾಯಿ ಕೊಡುತ್ತಿದ್ದಾರೆ. ಅದನ್ನೆಲ್ಲಾ ಏತಕ್ಕೆ ಕನ್ಸಿಡರ್ ಮಾಡಬಾರದು? ಇಲ್ಲಿ ಕೊಡುತ್ತಾ ಇರುವುದನ್ನೇ ಏತಕ್ಕೆ ತೆಗೆದುಕೊಳ್ಳುತ್ತೀರಿ? ಅವರು ಹೌಸ್ ಸರ್ಜನ್ ಆಗಿ ಪಾಸ್ ಮಾಡಿದ ನಂತರ ಡಾಕ್ಟರ್ ಡಿಗ್ರಿ ತೆಗೆದುಕೊಳ್ಳಬೇಕಾದರೆ ಅವರಿಗೆ ಅರ್ಹತೆ ಇರಬೇಕು. ಅವರು ದೊಡ್ಡ ಡಾಕ್ಟರ್ ಹತ್ತಿರ ಕಲಿತುಕೊಳ್ಳಬೇಕು ಎಂದು ಹೇಳುತ್ತೀರಾ. ಹೀಗೆ ಅವರು ಕಲಿಯತಕ್ಕಂಥ ಸಂದರ್ಭದಲ್ಲಿ ಸ್ಟೈಫಂಡನ್ನು ಏತಕ್ಕೆ ಹೆಚ್ಚಿಗೆ ಕೊಡಬಾರದು? ಇದನ್ನು ತಾವು ಮನಗಾಣಬೇಕು. ಅಲ್ಲದೆ ತಾವು ಇವರ ವಿಷಯದಲ್ಲಿ ಬಹಳ ಸಿಂಪತಿ ಇದೆ ಎಂದು ಹೇಳುತ್ತೀರಿ. ಆ ಸಿಂಪತಿಯನ್ನು ಕಾರ್ಯರೂಪದಲ್ಲಿ ಆದಷ್ಟು ಬೇಗ ತೋರಿಸಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಈಗ ತಾವು ಹೇಳಿದಿರಿ. ಕಂಪಲ್ಸರಿ ರೊಟೇಟಿಂಗ್ ಹೌಸಮನ್‌ಷಿಪ್ ತೆಗೆದುಕೊಂಡರೇನೇ ಎಂ. ಬಿ. ಬಿ. ಎಸ್. ಕಂಪ್ಲೀಟ್ ಆಗುತ್ತದೆ. ಅವರಿಗೆ ಡಾಕ್ಟರ್ ಆಗುವದಕ್ಕೆ ಅರ್ಹತೆ ಇರುತ್ತದೆ. ಇಲ್ಲದಿದ್ದರೆ ಇಲ್ಲ ಎಂದು ಹೇಳಿದಿರಿ. ಇದಕ್ಕೆ ಮದ್ರಾಸ್‌ನವರು ಫೀಸ್ ತೆಗೆದುಕೊಳ್ಳುತ್ತಾರೆ ಎಂದು ಹೇಳಿದಿರಿ. ನೀವೂ ಕೂಡ ಅದೇ ರೀತಿಯಾಗಿ ಅವರ ಹತ್ತಿರ ಫೀಸ್ ಲೇವಿ ಮಾಡಿ ಏತಕ್ಕೆ ತೆಗೆದುಕೊಳ್ಳಬಾರದು? ಈ ಕೋರ್ಸ್ ಮುಗಿಯಬೇಕಾದರೆ ಕಂಪಲ್ಸರಿ ರೊಟೇಟಿಂಗ್ ಹೌಸಮನ್‌ಷಿಪ್ ತೆಗೆದುಕೊಳ್ಳುವುದಕ್ಕೆ ಟ್ರೈನಿಂಗ್ ಕೊಡುತ್ತಿದ್ದಿರಿ. ಇದಕ್ಕಾಗಿ ಅವರಿಗೆ ಸ್ಟೈಫಂಡ್ ಹೆಚ್ಚಿಗೆ ಕೊಡುವುದಕ್ಕೆ ಸಹಾಯ ಮಾಡಿ ಎಂದು ನಾನು ಕೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಫೀಸ್ ಲೇವಿ ಮಾಡಿದರೆ ಅವರಿಗೆ ತೊಂದರೆಯಾಗುತ್ತದೆ. ಆದುದರಿಂದ ಮಾಡಲಿಲ್ಲಾ. ಈಗ ಅವರು ಕೇಳಿರುವುದು ಏನೆಂದರೆ ಈಗ ಕೊಡುತ್ತಾ ಇರತಕ್ಕಂಥ ೧೫೦ ರೂಪಾಯಿ ಕಡಿಮೆ. ಅದನ್ನು ಜಾಸ್ತಿ ಮಾಡಬೇಕು ಎಂದು. ಎನೇದು ಹೌಸರೆಂಟ್ ಕೊಡಬೇಕು ಎಂದು ಮತ್ತು ಇದರ ಜೊತೆಗೆ ಇನ್ನೂ ಒಂದೆರಡು ಪಾಯಿಂಟ್ಸ್ ಕೇಳಿದ್ದಾರೆ. ಬೇರೆ ಬೇರೆ ರಾಜ್ಯದಲ್ಲಿ ಯಾವ ರೀತಿ ಇದೆ ಅದೇ ರೀತಿ ಕೊಡಬೇಕು ಎಂದು ಕೇಳಿದ್ದಾರೆ.

I will consider from all aspects. I will not commit that I will do this or that. As the hon. member himself knows this will have to go before the cabinet and we will have to examine and take a decision. In the meantime they will facilitate my work if they give up their agitational attitude and go back to their work.